# 85+ ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನ ಮತದಾರರಿಗೆ ಮನೆಯಿಂದಲೇ ಮತದಾನ ಮಾಡಲು ಕ್ರಮ

ಕೊಪ್ಪಳ, ಏಪ್ರಿಲ್ 25 : ಲೋಕಸಭಾ ಚುನಾವಣೆ–2024ರ ಹಿನ್ನೆಲೆಯಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಮೇ 7ರಂದು ಚುನಾವಣೆ ನಡೆಯಲಿದ್ದು, ಈ ಚುನಾವಣೆಯಲ್ಲಿ ಕೊಪ್ಪಳ ಜಿಲ್ಲೆಯ 85+ ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನ ಮತದಾರರ ಪೈಕಿ 12 ಡಿ ಮುಖಾಂತರ ಅರ್ಜಿ ಸಲ್ಲಿಸಿ ಮನೆಯಿಂದಲೇ ಮತದಾನ ಮಾಡಲು ಆಯ್ಕೆ ಮಾಡಿದ ಮತದಾರರಿಗೆ ಏ.25 ರಿಂದ ಏ.30 ರವರೆಗೆ ಅವರ ಮನೆಗೆ ತೆರಳಿ ಮತದಾನ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳು ಜರುಗಿಸುವರು. ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ರೂಟ್ ಮತ್ತು ತಂಡಗಳ ವಿವರ: ಕೊಪ್ಪಳ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿಧಾನಸಭಾ ಕ್ಷೇತ್ರವಾರು ರೂಟ್‌ಗಳನ್ನು ಮತ್ತು ತಂಡಗಳನ್ನು ರಚಿಸಲಾಗಿದ್ದು, ವಿವರ ಇಂತಿದೆ. 58–ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ ತಲಾ 7 ರೂಟ್ ಹಾಗೂ ತಂಡಗಳು, 59–ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 10 ರೂಟ್ ಹಾಗೂ ತಂಡಗಳು, 60–ಕುಷ್ಟಗಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 12 ರೂಟ್ ಹಾಗೂ ತಂಡಗಳು, 61–ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 10 ರೂಟ್ ಹಾಗೂ ತಂಡಗಳು, 62–ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 9 ರೂಟ್ ಹಾಗೂ ತಂಡಗಳು, 63–ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ತಲಾ 9 ರೂಟ್ ಹಾಗೂ ತಂಡಗಳು, 64–ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ತಲಾ 22 ರೂಟ್ ಹಾಗೂ ತಂಡಗಳು ಮತ್ತು 92–ಸಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ತಲಾ 2 ರೂಟ್ ಹಾಗೂ ತಂಡಗಳನ್ನು ರಚಿಸಲಾಗಿದೆ.ಮನೆಯಿಂದಲೇ ಮತದಾನಕ್ಕಾಗಿ ಅರ್ಜಿ ಸಲ್ಲಿಸಿದ ಮತದಾರರು ಏ.25 ರಿಂದ ಏ.30ರವರೆಗೆ ತಾವು ನೀಡಿದ ವಿಳಾಸದ ಮನೆಗಳಲ್ಲಿ ಹಾಜರಿದ್ದು, ಮತ ಚಲಾಯಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

# ಬಳ್ಳಾರಿಯಲ್ಲಿ ಏ.26 ರಂದು ಖಾಸಗಿ ಕಾರ್ಯಕ್ರಮ; ಭಾರಿ ಸರಕು ವಾಹನಗಳ ಸಂಚಾರ ನಿರ್ಬಂಧ

ಬಳ್ಳಾರಿ,ಏ.25–:ನಗರದ ಡಾ.ರಾಜ್‌ಕುಮಾರ್ ರಸ್ತೆಯ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಏ.26 ರಂದು ಪಕ್ಷದ ಸಮಾವೇಶ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರ ಸುರಕ್ಷತೆ, ಅತೀ ಗಣ್ಯ ವ್ಯಕ್ತಿಗಳ ಭದ್ರತೆ ಹಾಗೂ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ಹಿತದೃಷ್ಟಿಯಿಂದ ಮೋಟರ್ ವಾಹನ ಕಾಯ್ದೆ 1988 ಕಲಂ 115 ರಡಿಯಲ್ಲಿ ಹಾಗೂ ಕರ್ನಾಟಕ ಮೋಟರ್ ವಾಹನ ನಿಯಮ 1989 ನಿಯಮ 221ಎ(5) ರನ್ವಯ ಪ್ರದತ್ತವಾದ ಅಧಿಕಾರಿ ಚಲಾಯಿಸಿ ಏ.26 ರಂದು ಮಧ್ಯಾಹ್ನ 03 ಗಂಟೆಯಿಂದ ರಾತ್ರಿ 09 ಗಂಟೆಯವರೆಗೆ ಬಳ್ಳಾರಿ ನಗರದಲ್ಲಿ ಹೊಸಪೇಟೆಯಿಂದ ಸಿರುಗುಪ್ಪ ಕಡೆಗೆ ಹೋಗುವ ಹಾಗೂ ಸಿರುಗುಪ್ಪದಿಂದ ಹೊಸಪೇಟೆ ಮತ್ತು ಬೆಂಗಳೂರು ರಸ್ತೆ ಕಡೆಗೆ ಚಲಿಸುವ ಭಾರೀ ಸರಕು ಸಾಗಣಿಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

# ಏ.26 ರಂದು ಬಳ್ಳಾರಿಯಲ್ಲಿ ಖಾಸಗಿ ಕಾರ್ಯಕ್ರಮ

## ತೋರಣಗಲ್ಲು ವಿಮಾನ ನಿಲ್ದಾಣ ವ್ಯಾಪ್ತಿಯಲ್ಲಿ ವಿವಿಧೆಡೆ ಸಂಚಾರ ಸ್ಥಗಿತ

ಬಳ್ಳಾರಿ,ಏ.25–:ನಗರದಲ್ಲಿ ಏ.26 ರಂದು ನಡೆಯುವ ಖಾಸಗಿ ಕಾರ್ಯಕ್ರಮ ನಿಮಿತ್ತ ಗಣ್ಯರು, ಮುಖಂಡರುಗಳು ತೋರಣಗಲ್ಲು ವ್ಯಾಪ್ತಿಯ ಜಿಂದಾಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿ, ರಸ್ತೆ ಮಾರ್ಗವಾಗಿ ಬಳ್ಳಾರಿಗೆ ತೆರಳುವ ಮತ್ತು ಬಳ್ಳಾರಿಯಲ್ಲಿ ಸಭೆ ಮುಗಿಸಿಕೊಂಡು ಪುನಃ ಜಿಂದಾಲ್‌ಗೆ ಬಂದು ದೆಹಲಿಗೆ ತೆರಳುವ ಹಿನ್ನಲೆಯಲ್ಲಿ ಸಾರ್ವಜನಿಕರ ಸುರಕ್ಷತೆ, ಗಣ್ಯ ವ್ಯಕ್ತಿಗಳ ಭದ್ರತೆ ಹಾಗೂ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ಹಿತದೃಷ್ಟಿಯಿಂದ ಕರ್ನಾಟಕ ಮೋಟರ್ ವಾಹನ ಕಾಯ್ದೆ 1988 ಕಲಂ 115 ರಡಿಯಲ್ಲಿ ಹಾಗೂ ಕರ್ನಾಟಕ ಮೋಟರ್ ವಾಹನ ನಿಯಮ 1989 ನಿಯಮ 221ಎ(5) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಏ.26 ರಂದು ಬೆಳಿಗ್ಗೆ 08 ಗಂಟೆಯಿಂದ ರಾತ್ರಿ 09 ಗಂಟೆಯವರೆಗೆ ಸಂಡೂರು ತಾಲ್ಲೂಕಿನ ಮೈನ್ಸ್‌ಗಳಿಂದ ಹಾಗೂ ಬನ್ನಿಹಟ್ಟಿ ಮತ್ತು ಜಿಂದಾಲ್ ವಿಮಾನ ನಿಲ್ದಾಣದ ಮಾರ್ಗಗಳಿಂದ ಬಳ್ಳಾರಿ ಕಡೆಗೆ ಬರುವ ಮತ್ತು ವಾಪಸ್ಸು ಹೋಗುವ ಲಾರಿಗಳ ಸಂಚಾರವನ್ನು ಸ್ಥಗಿತಗೊಳಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

# ಉಪ್ಪಾರ ನಿಗಮದ ಮಾಜಿ ಅಧ್ಯಕ್ಷರ ಹೇಳಿಕೆಗೆ ಕಿಡಿಕಾರಿದ ಸುಭಾಷ ಪೂಜೇರಿ



ಮೂಡಲಗಿ : ಉಪ್ಪಾರ ಸಮಾಜ ನಗಮದ ಮಾಜಿ ಅಧ್ಯಕ್ಷ ಗಿರೀಶ ಉಪ್ಪಾರ ಅವರು ಏ.24ರಂದು ಸುದ್ದಿಗೋಷ್ಠಿ ನಡೆಸಿ, ಉಪ್ಪಾರ ಸಮಾಜಕ್ಕೆ ಬಿಜೆಪಿ ಪಕ್ಷ ಬಹಳ ಉಪಕಾರ ಮಾಡಿದ್ದು, ಸಾಕಷ್ಟು ಸಮಾಜದ ಅಭಿವೃದ್ಧಿಗೆ ಸಹಕಾರ ನೀಡಿದರಿಂದ ಉಪ್ಪಾರ ಸಮಾಜ ಬಾಂಧವರು ಬಿಜೆಪಿಗೆ ಮತ ಹಾಕಬೇಕೆಂಬ ಹೇಳಿಕೆಗೆ ಉಪ್ಪಾರ ಸಮಾಜದ ಕಾಂಗ್ರೇಸ್ ಮುಖಂಡ ಸುಭಾಷ ಪೂಜೇರಿ ಕಿಡಿಕಾರಿದರು.ಗುರುವಾರದಂದು ಪಟ್ಟಣದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಉಪ್ಪಾರ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದೇ ಕಾಂಗ್ರೇಸ ಸರ್ಕಾರ. ಉಪ್ಪಾರ ಸಮಾಜದ ನಾಯಕರನ್ನು ರಾಜಕೀಯವಾಗಿ ಬೆಳೆಸಲು ಸಹಕಾರ ನೀಡಿ ಸಚಿವ ಸ್ಥಾನದವರೆಗೂ ಅವಕಾಶ ಕಲ್ಪಿಸಿಕೊಟ್ಟಿದು ಸಹ ಕಾಂಗ್ರೇಸ ಪಕ್ಷ ಹೀಗಿರುವಾಗ ಬಿಜೆಪಿ ಪಕ್ಷ ನಮ್ಮ ಉಪ್ಪಾರ ಸಮಾಜಕ್ಕೆ ಏನು ಉಪಕಾರ ಮಾಡಿ ನಮ್ಮ ಸಮಾಜದ ಅಭಿವೃದ್ಧಿಗೆ ಸಹಕಾರ ನೀಡಿದೆ ? ಎಂದು ನಿಗಮದ ಮಾಜಿ ಅಧ್ಯಕ್ಷ ಗಿರೀಶ ಉಪ್ಪಾರ ಅವರನ್ನು ಪ್ರಶ್ನಿಸಿದರು. ನಮ್ಮ ಉಪ್ಪಾರ ಸಮಾಜದಕ್ಕೆ ಬಿಜೆಪಿ ಪಕ್ಷದಿಂದ ಸಹಾಯ, ಸಹಕಾರ ನೀಡಿದೇಯಾ ಅಥವಾ ಕಾಂಗ್ರೇಸ ಪಕ್ಷದಿಂದ ನೀಡಿದೇಯಾ ಎಂದು ಬಹಿರಂಗವಾಗಿ ಚರ್ಚೆಗೆ ಬನ್ನ ಎಂದು ಜಿ.ಕೆ.ಉಪ್ಪಾರ ಅವರಿಗೆ ಸವಾಲ್ ಹಾಕಿದ ಅವರು, ಯಾವುದೇ ಕಾರಣಕ್ಕೂ ನಮ್ಮ ಸಮಾಜದ ಬಾಂಧವರು ಸುಳ್ಳು ಸುದ್ದಿಗಳಿಗೆ ಕಿವಿಕೊಡದೇ ಕಾಂಗ್ರೇಸ ಪಕ್ಷವನ್ನು ಬೆಂಬಲಿಸಬೇಕೆಂದು ಎಂದು ಮನವಿ ಮಾಡಿಕೊಂಡರು.ನಮ್ಮ ಉಪ್ಪಾರ ಸಮಾಜದಕ್ಕೆ ಬಿಜೆಪಿ ಪಕ್ಷದಿಂದ ಸಹಾಯ, ಸಹಕಾರ ನೀಡಿದೇಯಾ ಅಥವಾ ಕಾಂಗ್ರೇಸ ಪಕ್ಷದಿಂದ ನೀಡಿದೇಯಾ ಎಂದು ಬಹಿರಂಗವಾಗಿ ಚರ್ಚೆಗೆ ಬನ್ನ ಎಂದು ಜಿ.ಕೆ.ಉಪ್ಪಾರ ಅವರಿಗೆ ಸವಾಲ್ ಹಾಕಿದ ಅವರು, ಯಾವುದೇ ಕಾರಣಕ್ಕೂ ನಮ್ಮ ಸಮಾಜದ ಬಾಂಧವರು ಸುಳ್ಳು ಸುದ್ದಿಗಳಿಗೆ ಕಿವಿಕೊಡದೇ ಕಾಂಗ್ರೇಸ ಪಕ್ಷವನ್ನು ಬೆಂಬಲಿಸಬೇಕೆಂದು ಎಂದು ಮನವಿ ಮಾಡಿಕೊಂಡರು.ಈ ಸಂದರ್ಭದಲ್ಲಿ ಉಪ್ಪಾರ ಸಮಾಜದ ಮುಖಂಡರಾದ ಲಕ್ಷ್ಮಣ ಬಡ್ಲಿಂಗಪ್ಪಗೋಳ, ಗುರು ಉಪ್ಪಾರ, ಲಕ್ಕಪ್ಪ ಉಪ್ಪಾರ ಇದ್ದರು.

# ಎತ್ತಿನ ಬಂಡಿ ಏರಿ ಮತದಾನ ಜಾಗೃತಿ ಮೂಡಿಸಿದ ತಾ.ಪಂ ಇಓ

(1 ನೇ ಪುಟದಿಂದ)

ಸಹಾಯಕ ನಿರ್ದೇಶಕರಾದ ನಂಗನಗೌಡ ವಿ.ಹೆಚ್. ರವರು ಮಾತನಾಡಿ, ಬೇಸಿಗೆ ಇರುವುದರಿಂದ ಯಾರೂ ಗುಳೆ ಹೋಗದೇ, ನಮ್ಮೂರಲ್ಲೇ ನರೇಗಾ ಯೋಜನೆಯಡಿ ಕೆಲಸ ಮಾಡುವ ಮೂಲಕ ಯೋಜನೆಯ ಸದುಪಯೋಗ ಪಡೆಯಲು ತಿಳಿಸಿದರು. ಜೊತೆಗೆ ಸಮುದಾಯ ಕಾಮಗಾರಿಯಷ್ಟೇ ಅಲ್ಲದೇ, ವೈಯಕ್ತಿಕ ಕಾಮಗಾರಿಗಳ ಪ್ರಯೋಜನ ಪಡೆಯಲು ತಿಳಿಸಿದರು.ಇದಕ್ಕೂ ಮುನ್ನ, ಬಿಳಿ ಸಮವಸ್ತ್ರದಲ್ಲಿ ಕಂಗೊಳಿಸಿದ ತಾಲೂಕು ಸ್ವೀಪ್ ಸಮಿತಿಯ ಸಿಬ್ಬಂದಿಗಳು ಎತ್ತಿನ ಬಂಡಿಯನ್ನು ಏರಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ವಿಭಿನ್ನವಾಗಿ ಮತದಾನದ ಕುರಿತು ಜಾಗೃತಿಯನ್ನು ಮೂಡಿಸಿದರು.ಬಳಿಕ ಕೂಲಿಕಾರರಿಗೆ ಮತದಾರರ ಪ್ರತಿಜ್ಞಾ ವಿಧಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ನಂಗಪ್ಪ ಮೂಲಿಮನಿರವರು ಬೋಧಿಸಿದರು.

ಈ ವೇಳೆ ತಾ.ಪಂ. ಸಿಬ್ಬಂದಿಗಳಾದ ಸಂಗಪ್ಪ ನಂದಪೂರ, ಚಂದ್ರಶೇಖರ್ ಹಿರೇಮಠ್, ಗ್ರಾಮ ಪಂಚಾಯತಿ ಸಿಬ್ಬಂದಿಗಳಾದ ಮಹಾಂತೇಶ್ ಸುಡಿ, ಸಂಗಮೇಶ್, ಬಸವರಾಜ್, ಹನುಮಂತ, ಹನುಮಂತ ಸಂದೋಣಿ, ರಂಗಪ್ಪ, ಶಂಕ್ರಪ್ಪ, ಶರಣಪ್ಪ, ಭೀಮವ್ವ, ಹನುಮಂತ, ಮಾರುತಿ ಸಾಲುಂಕಿ, ರೇಣುಕಾ, ಕಸ್ತೂರಿ ಹಾಗೂ ಕಾಯಕ ಬಂದುಗಳು, ಕೂಲಿಕಾರ್ಮಿಕರು ಮತ್ತು ಸಾರ್ವಜನಕರು ಹಾಜರಿದ್ದರು.

# ಒಡೆದು ಆಳುವ ತಂತ್ರಕ್ಕೆ ಬಿಜೆಪಿ ಮುಂದಾಗಿದೆ: ಸುರ್ಜೇವಾಲಾ

(1 ನೇ ಪುಟದಿಂದ)

ಅಡಿಯಲ್ಲಿ ಸ್ಪಷ್ಟವಾದ ಅಭಿವೃದ್ಧಿಯ ಕೊರತೆಯನ್ನು ಸೂಚಿಸಲು ಸಾಂಕೇತಿಕವಾಗಿ ಖಾಲಿ ಚಂಬು (ಹಡಗು) ಪ್ರದರ್ಶಿಸಿದರು.

ಸುರ್ಜೇವಾಲಾ ಅವರು ಕರ್ನಾಟಕದ ಜನತೆಯ ಭಾವನೆಯನ್ನು ಪ್ರತಿಧ್ವನಿಸುವುದರೊಂದಿಗೆ ಮೋದಿ ಮತ್ತು ಷಾ ಅವರ ನಿರ್ಗಮನಕ್ಕೆ ಒತ್ತಾಯಿಸಿ ಗೋ ಬ್ಯಾಕ್ ಮೋದಿ, ಗೋ ಬ್ಯಾಕ್ ಅಮಿತ್ ಶಾ ಎಂಬ ಘೋಷಣೆಯೊಂದಿಗೆ ಪತ್ರಿಕಾಗೋಷ್ಠಿಯನ್ನು ಮುಕ್ತಾಯಗೊಳಿಸಲಾಯಿತು.

# ಕರಾಮುವಿಯಿಂದ ಉಚಿತ ಕೆಎಎಸ್ ಸ್ಪರ್ಧಾತ್ಮಕ ತರಬೇತಿ

ವಿಜಯಪುರ, ಏ.–:– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಹಾಗು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕರಾಮುವಿ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಆಸಕ್ತರು ಏಪ್ರೀಲ್ 30 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821–2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕರಾಮುವಿ ವಿಜಯಪುರದ ಪ್ರಾದೇಶಿಕ ನಿರ್ದೇಶಕರಾದ ಡಿ.ಎಸ್. ಮೈತ್ರಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಲೇರಿಯ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಿ: ಡಿಹೆಚ್ಓ ಡಾ.ವೈ.ರಮೇಶ್ ಬಾಬು

ಪಡೆಯಬಹುದು ಎಂದು ತಿಳಿಸಿದರು. (1 ನೇ ಪುಟದಿಂದ)

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಮಾತನಾಡಿ, ಮಲೇರಿಯಾ ರೋಗ ತಡೆಗಟ್ಟಲು ನವೀನ ವಿಧಾನಗಳನ್ನು ಬಳಸಿ ಮಲೇರಿಯಾ ಪ್ರಕರಣಗಳನ್ನು ಶೂನ್ಯಕ್ಕೆ ತರಲು ಮತ್ತು 2025ರ ವೇಳೆಗೆ ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಸಮುದಾಯದ ಸಹಭಾಗಿತ್ವ ಮಹತ್ವದ್ದಾಗಿದೆ ಎಂದರು.

ಇದೇ ವೇಳೆ ಮಲೇರಿಯಾ ಜಾಗೃತಿಯ ಕುರಿತ ಭಿತ್ತಿ ಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಟ್ಯಾಬ್ಲೋ ಜಾಗೃತಿ ಜಾಥವು ನಗರ ಪ್ರದೇಶದ ಎಲ್ಲಾ ಪ್ರಮುಖ ಬೀದಿಗಳಲ್ಲಿ ಹಾಗೂ ವಾರ್ಡ್‌ಗಳಲ್ಲಿ ಸಂಚರಿಸಿ ಸಾರ್ವಜನಕರಿಗೆ ಮಲೇರಿಯಾ ರೋಗದ ಕುರಿತು ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ, ಡಾ.ಹನುಮಂತಪ್ಪ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರಕುಮಾರ್, ಜಿಲ್ಲಾ ಕೀಟಶಾಸ್ತ್ರಜ್ಞ ನಂದಾಕಡಿ, ಜಿಲ್ಲಾ ವಿಬಿಡಿಸಿ ಸಮಾಲೋಚಕ ಪ್ರತಾಪ್.ಹೆಚ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶಕುಂತಲಾ ಮ್ಯಾಳಿ, ನಾಗರಾಜ, ರವೀಂದ್ರ ಜಿನಗ, ಮರಿಬಸವನಗೌಡ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಅಂಭುಜ, ನಂದಿನ, ಶಕುಂತಲಾ ಸೇರಿದಂತೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳು, ವಿಬಿಡಿಸಿ ಸಿಬ್ಬಂದಿ ವರ್ಗದವರು, ತಾಲೂಕು ಆರೋಗ್ಯಾಧಿಕಾರಿಗಳ ಸಿಬ್ಬಂದಿಗಳು, ಮಲೇರಿಯಾ ಲಿಂಕ್ ವಾಲಂಟೀಯರ್ಸ್ ಮತ್ತು ಇತರೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸಿಬ್ಬಂದಿಗಳು ಭಾಗವಹಿಸಿದ್ದರು.

# ಪಶುಪಾಲನೆ ಮಾಡದಿದ್ದರೆ ಪಶುಗಳನ್ನು ಸಾಕಬೇಡಿ




ಸಂಡೂರು: ಏ:23: ನಮ್ಮ ಜೀವನದಲ್ಲಿ ಬದುಕಿನ ಪಾಲನೆ ಎಷ್ಟು ಮುಖ್ಯವೋ ಪಶುಗಳ ಪ್ರಾಣಿಗಳ ಪಾಲನೆಯೂ ಅಷ್ಟೇ ಪ್ರಾಮುಖ್ಯತೆಯನ್ನು ಹೊಂದಿದೆ. ನಾವು ಮಾತನಾಡುವ ಮನುಷ್ಯರು ನಾವು ಇನ್ನೆಷ್ಟು ಸಹಕಾರದಿಂದ ರಕ್ಷಣೆ ಮಾಡಿಕೊಳ್ಳುತ್ತೇವೆ ಅದರೆ ಪಶುಗಳಿಗೆ ಪ್ರಾಣಿಗಳಿಗೆ ಬಾಯಿಯಿಲ್ಲ ಮಾತನಾಡಲು ಶಕ್ತಿಯೂ ಇಲ್ಲ ಅವು ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಲು ಸಾಧ್ಯ, ಅವುಗಳ ರಕ್ಷಣೆ ನಮ್ಮಿಂದ ಮಾತ್ರ ಸಾಧ್ಯ, ಪಶುಗಳ ಪಾಲನೆ ಮಾಡಿದರೆ ನಮ್ಮ ಮನೆಯಂಗಳದಲ್ಲಿ ಕಟ್ಟಿಕೊಳ್ಳಿ ಕಟ್ಟಿಕೊಂಡು ರಕ್ಷಣೆ ಕೊಡಿ. ನಮಗೆ ರಕ್ಷಣೆ ಕೊಡದಿದ್ದರೆ ಪುರಸಭೆಯವರು ನಿರ್ಮಿಸಿದ ಬಂದಿದೊಡ್ಡಿಯಲ್ಲಿ ಹಾಕಿ ಅವರಾದರೂ ಪಶುಗಳಿಗೆ ಪ್ರಾಣಿಗಳಿಗೆ ರಕ್ಷಣೆ ನೀಡುತ್ತಾರೆ. ಬಾಯಿಲ್ಲದ ಪಶುಗಳನ್ನು ಬಯಲಿಗೆ ಬಿಟ್ಟು ನರಳುವಂತೆ ಮಾಡಬೇಡಿ ನಮ್ಮಂತೆ ಪಶುಗಳ ಪ್ರಾಣಿಗಳ ಜೀವ ಎನ್ನುವುದನ್ನು ಮರೆಯಬಾರದು ರೈತರಿಗೆ ಪಶುವೈದ್ಯಾಧಿಕಾರಿ ಡಾ. ವಲೀಭಾಷಾರವರು ಮನವಿ ಮಾಡಿದರು. ಅವರು ಪುರಸಭೆ ಬಸ್ ನಿಲ್ದಾಣದ ಅವರಣದ ಅಪೋಲೋ ಔಷಧಿ ಅಂಗಡಿಯ ಹತ್ತಿರ ಹಸುವಿನ ಕರು ಬಳಲುತ್ತಿದ್ದ ಸಮಯದಲ್ಲಿ ಕರವೇ ಶಿವರಾಮೇಗೌಡ ಬಣದ ತಾಲೂಕು ಅಧ್ಯಕ್ಷರಾದ ರಾಜು ಪಾಳೇಗಾರ್ ಹಸುವಿನ ಮರಿಯ ನರಳಾಟ ನೋಡದೇ ತಕ್ಷಣವೆ ಪಶುವೈದ್ಯಾಧಿಕಾರಿಗಳಿಗೆ ದೂರವಾಣಿ ಕರೆಮಾಡಿ ವಿಷಯ ತಿಳಿಸಿದಾಗ ಕೂಡಲೇ ಸ್ಪಂದಿಸಿದ ಪಶುವೈದ್ಯಾಧಿಕಾರಿ ವಲಿಭಾಷಾರವರೊಂದಿಗೆ ವಿಜಯಮಹಾಂತೇಶ್, ಭಾಗ್ಯ ಶ್ರೀ, ಕರುವಿನ ರಕ್ಷಣೆಗೆ ಮುಂದಾಗಿ ಆರೈಕೆ ಮಾಡಿ ಕರುವಿಗೆ ಉತ್ತಮ ಶುಶ್ರುಷೆ ಮಾಡಿ ಕರುವು ಚೇತರಿಸಿಕೊಳ್ಳುವಂತೆ ಮಾಡಿದರು. ಈ.ಕೀರ್ತಿ ಪಿ. ರಾಜು ಪಾಳೇಗಾರ್ ಅವರಿಗೆ ಸಲ್ಲಬೇಕಾಗುತ್ತದೆ.

ನಡೆದಿದ್ದೇನು:– ಬೆಳಗಿನ ಜಾವ 4.30 ನ. ಕೆ.ಇ.ಬಿ. ವೃತ್ತದ ಬಳಿ ಹಸುವಿನ ಮರಿ ತಿರುಗಾಡುತ್ತಿರುವ ಸಂದರ್ಭದಲ್ಲಿ ಬೀದಿ ನಾಯಿಗಳು ಹಸುವಿನ ಮರಿಯನ್ನು ಕಚ್ಚಿ ಗಾಯಗೊಳಿಸಿತು. ತದನಂತರ ಕೆ.ಇ.ಬಿ. ವೃತ್ತದ ಬಳಿ ಇರುವ ಹೋಟಲ್ ಮಾಲೀಕರೊಬ್ಬರು ಅರಿಷಿಣ ಪುಡಿ ಹಚ್ಚಿ ರಕ್ಷಣೆಯೇನ್ನು ನೀಡಿ ಪಶುವೈದ್ಯಧಾಕಾರಿಗಳ ಕಛೇರಿಗೆ ಕರೆದಯೋದ್ದು ಅಲ್ಲಿ ವೈದ್ಯರು ಚಿಕಿತ್ಸೆ ನೀಡಿ ಕಳುಹಿಸಿದರು. ಅದು ಫಲಕಾರಿಯಾಗದೇ ಪುರಸಭೆ ಬಸ್ ನಿಲ್ದಾಣದ ಸ್ವಾಸ್ಥ್ಯ ಕಳೆದುಕೊಂಡಿತ್ತು. ಅಸ್ವಸ್ಥ ಗೊಂಡ ಹಸುವಿನ ಮರಿಯನ್ನು ಮತ್ತೋಮ್ಮೆ ಚಿಕಿತ್ಸೆ ನೀಡಿ ಫಲಕಾರಿಯಾಗುವಂತೆ ಮಾಡಿ ಹಸುವಿನ ಮರಿಗೆ ಉತ್ತಮ ಚಿಕಿತ್ಸೆ ನೀಡಿ ಚೇತರಿಸಿಕೊಳ್ಳುವಂತೆ ಮಾಡಿದರು.

# ಸ್ಕೌಟ್ಸ್ & ಗೈಡ್ಸ್ ವಿಭಾಗದಿಂದ ಬೇಸಿಗೆ ಶಿಬಿರ




ಸಂಡೂರು : ಜಿಂದಾಲ್ ಆದರ್ಶ ವಿದ್ಯಾಲಯ ಶಾಲೆಯಲ್ಲಿ ದಿನಾಂಕ 22–04–2024 ಮತ್ತು 23–04–2024 ರಂದು ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದಿಂದ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು.

ಶಿಬಿರದಲ್ಲಿ ಮೊದಲು ಸ್ಕೌಟ್ ಲಾ, ಸ್ಕೌಟ್ ನಿಯಮಗಳು, ಬಿಪಿ 6 ವ್ಯಾಯಾಮಗಳು, ಪ್ರಾರ್ಥನೆಗೀತೆ, ಧ್ವಜಗೀತೆ, ಸ್ಕೌಟ್ ಪದ್ಧತಿಗಳು, ಸಮವಸ್ತ್ರದ ಕುರಿತು ತಿಳಿಸಿ ಕೊಡಲಾಯಿತು. ನಂತರ ಚಟುವಟಿಕೆಗಳ ಭಾಗವಾದ ಮೋಜಿನ ಆಟಗಳನ್ನು ಆಡಿಸಲಾಯಿತು.ಶಾಲೆಯ ವೈದ್ಯರಾದ ಸಂಗೀತ ರವರು ಪ್ರಾಥಮಿಕ ಚಿಕಿತ್ಸಾ ಪದ್ಧತಿಗಳನ್ನು ಪ್ರಾಯೋಗಿಕವಾಗಿ ಮಕ್ಕಳಿಗೆ ತಿಳಿಸಿಕೊಟ್ಟರು.

ಎರಡನೆಯ ದಿನ ಮಕ್ಕಳಿಗೆ "ಪರಿಸರ ನಡಿಗೆ" ಯನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಶಿಕ್ಷಕರು ಹಾಗೂ ವಕೀಲರಾದ ರವಿಕುಮಾರ್ ಮಕ್ಕಳಿಗೆ ಕಾನೂನಿನ ಅರಿವು ಮೂಡಿಸಿದರು. ನಂತರ ಮಕ್ಕಳು ವಿವಿಧ ಬಗೆಯ ಆಹಾರ ತಯಾರಿಕೆಯಲ್ಲಿ ತೊಡಗಿಕೊಂಡು ಬೆಂಕಿ ಸಹಿತ ಹಾಗೂ ಬೆಂಕಿ ರಹಿತವಾದ ಅಡುಗೆಗಳನ್ನು ತಯಾರಿಸಿದರು. ಕೊನೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ ಶಾಲೆಯ ಮುಖ್ಯ ಶಿಕ್ಷಕಿಯಾದ ಭಾಗ್ಯವತಿ ಗಾಜುಲ ಹಾಗೂ ಪ್ರಾಂಶುಪಾಲರಾದ ಪ್ರಶಾಂತ್ ಮೂಲೆ ಆಗಮಿಸಿ ಮಕ್ಕಳು ತಯಾರಿಸಿದ ವಿವಿಧ ಭಕ್ಷ್ಯಗಳನ್ನು ಸವಿದು ಮಕ್ಕಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಬೇಸಿಗೆ ಶಿಬಿರದಲ್ಲಿ ಸ್ಕೌಟ್ ಮುಖ್ಯಸ್ಥರಾದ ರವಿ ಎಂ, ಶ್ರೀಧರ್ ಎಂ, ಬಿ.ಮರಿಗೌಡ, ಜಿಲಾನ್,

ಗೈಡ್ಸ್ ವಿಭಾಗದ ಪದ್ಮಾವತಿ.ಪಿ, ಬಿ.ರೂಪ ರಾಯಚೂರು, ತುಳಸಿ.ಪಿ.ಬಿ, ಶ್ಯಾಮಲ, ಮತ್ತು ಬುಲ್ ಬುಲ್ಸ್ ವಿಭಾಗದ ವಾಮದೇವಪ್ಪ, ಮಂಜುನಾಥ್ ಹಾಗೂ ಫ್ಲಾಕ್ ವಿಭಾಗದಿಂದ ಸುನೀತ ಗಾಂಧಿ, ಅನುರಾಧ,ಭಾರತಿ ಇವರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಕೊನೆಗೆ ರಾಷ್ಟ್ರಗೀತೆ ಹಾಡಿಸಿ, ಮಕ್ಕಳಿಗೆ ಬಿಸ್ಕೆಟ್ ಮತ್ತು ತಂಪು ಪಾನೀಯ ನೀಡುವುದರ ಮೂಲಕ ಬೇಸಿಗೆ ಶಿಬಿರಕ್ಕೆ ತೆರೆ ಎಳೆಯಲಾಯಿತು. ಈ ಕಾರ್ಯಕ್ರಮಕ್ಕೆ ಸಹಕಾರ ಹಾಗೂ ಮಾರ್ಗದರ್ಶನ ನೀಡಿದ ಶ್ರೀಮತಿ ಮಲ್ಲೇಶ್ವರಿ ಎಸ್, ಓ,ಸಿ ಹಾಗೂ ಶ್ರೀಯುತ ಮೊಹಮ್ಮದ್ ಭಾಷಾ ಡಿ,ಓ,ಸಿ ಮತ್ತು ಶ್ರೀಯುತ ಸೋಮಪ್ಪ ಸಂಡೂರು ತಾಲೂಕಿನ ಸ್ಕೌಟ್ ಮತ್ತು ಗೈಡ್ಸ್ ವಿಭಾಗದ ಮುಖ್ಯಸ್ಥರು ಇವರಿಗೆ ಶಾಲೆ ವತಿಯಿಂದ ವಿಶೇಷ ಧನ್ಯವಾದಗಳನ್ನು ತಿಳಿಸಿ ಸನ್ಮಾನಸಲಾಯಿತು

# ಬಿಜೆಪಿಯ ಅಭಿವೃದ್ಧಿ ಕೆಲಸಗಳೇ ಶ್ರೀರಕ್ಷೆ– ಭಾಂಡಗೆ



ಕುಷ್ಟಗಿ: ಬಿಜೆಪಿಯ ಅಭಿವೃದ್ಧಿ ಕೆಲಸಗಳೇ ಬಿಜೆಪಿ ಅಭ್ಯರ್ಥಿಗಳಿಗೆ ಶ್ರೀರಕ್ಷೆಯಾಗಿದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ವಿಧಾನಸಭಾ ಕ್ಷೇತ್ರದ ಹನುಮನಾಳದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಮತಯಾಚಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರಸ್ತೆ, ರೈಲ್ವೆ ಸೇರಿ ಅಭಿವೃದ್ಧಿ ಕಾಮಗಾರಿ ಮೂಲಕ ವಿಶ್ವದಲ್ಲೇ ಭಾರತ ಮುಂಚೂಣಿ ಸ್ಥಾನದಲ್ಲಿದೆ ಎಂದರು.

ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕೆ. ಶರಣಪ್ಪ ಮಾತನಾಡಿ, ಪ್ರಧಾನ ನರೇಂದ್ರ ಮೋದಿ ಜೀ ನೇತೃತ್ವದ ಹತ್ತು ವರ್ಷಗಳ ಸರ್ಕಾರದಲ್ಲಿ ಭಾರತವು ಕೈಗಾರಿಕಾ ಉತ್ಪಾದನೆ ಕ್ಷೇತ್ರದಲ್ಲಿ ಅಗ್ರಗಣ್ಯ ಸ್ಥಾನಕ್ಕೇರಿದೆ. ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಮೊಬೈಲ್ ಉತ್ಪಾದನೆ ಇಲ್ಲದ ಸ್ಥಿತಿಯಿತ್ತು ಆದರೆ ಇಂದು ವಿಶ್ವದ ಎರಡನೇ ಅತಿದೊಡ್ಡ ತಯಾರಕರಾಗಿದ್ದೇವೆ. ದುರ್ಬಲ 5 ನೇ ಆರ್ಥಿಕತೆಯಿಂದ ಟಾಪ್ 5 ನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದೇವೆ. ಮುಂದಿನ ದಿನಗಳಲ್ಲಿ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪುವ ಮಟ್ಟಕ್ಕೆ ಭಾರತ ಹೊರಹೊಮ್ಮಲಿದೆ ಎಂದು ಕೇಂದ್ರ ಸರ್ಕಾರದ ಸಾಧನೆಗಳ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಕುಷ್ಟಗಿ ಬಿಜೆಪಿ ಮಂಡಲದ ಅಧ್ಯಕ್ಷ ಮಹಾಂತೇಶ ಬದಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಹೆಚ್ ಪಾಟೀಲ, ಶಾಸಕ ಗಾಲಿ ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ರಾಜ್ಯ ಬಿಜೆಪಿ ಕಾರ್ಯದರ್ಶಿ ಶರಣು ತಳ್ಳಿಕೇರಿ, ಮಾಜಿ ಸಚಿವ ಶಿವನಗೌಡ ನಾಯಕ, ಪ್ರಮುಖರಾದ ಪ್ರಭಾಕರ ಚಿಣಿ, ದೇವೇಂದ್ರಪ್ಪ ಬಳೂಟಗಿ, ಫಕೀರಪ್ಪ ವಕೀಲರು, ನಾಗಪ್ಪ ವಕೀಲರು, ಶರಣಪ್ಪ ಕುಂಬಾರ, ಪರಸಪ್ಪ ಕತ್ತಿ, ತೆವರಪ್ಪ ಚಿಕನಾಳ, ಕೆ.ಎಸ್.ಹನುಮಂತ, ಕೆ.ಎಸ್.ಹನುಮಂತ, ಅಂದಪ್ಪ ತಳವಾರ, ಮಹಾಂತೇಶ ಗಣವಾರಿ, ಈರಣ್ಣ ಗಜೇಂದ್ರಗಡ, ನಬಿಸಾಬ ಕುಷ್ಟಗಿ, ಶಂಕರಗೌಡ ಪಾಟೀಲ ಸೇರಿದಂತೆ ಉಭಯ ಪಕ್ಷದ ಪ್ರಮುಖರು, ಪದಾಧಿಕಾರಿಗಳು, ಕಾರ್ಯಕರ್ತರು, ಸಾರ್ವಜನಕರು ಉಪಸ್ಥಿತರಿದ್ದರು.

# ಅಂತರಾಷ್ಟ್ರೀಯ ಮಲೇರಿಯಾ ದಿನಾಚರಣೆ ಜಾಥಾ




ಬೆಳಗಾವಿ.ಏ.25: ಅಂತಾರಾಷ್ಟ್ರೀಯ ಮಲೇರಿಯಾ ದಿನಾಚರಣೆ ಅಂಗವಾಗಿ ಸರ್ಕಾರಿ ಶುಶ್ರೂಷಾ ಶಾಲೆ ಹಾಗೂ ಬಿಮ್ಸ್ ಮಹಾವಿದ್ಯಾಲಯ, ಗ್ರಾಮ ಪಂಚಾಯತಿ ಕಡೋಲಿ, ಪ್ರಾಥಮಿಕ ಆರೋಗ್ಯ ಕೇಂದ್ರ ಕಡೋಲಿ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ (ಏ.25) ಕಡೋಲಿ ಗ್ರಾಮದಲ್ಲಿ ವಿದ್ಯಾರ್ಥಿಗಳಿಂದ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಕಡೋಲಿ ಪಾಥಮಿಕ ಆರೋಗ್ಯ ಕೇಂದ್ರದಲ್ಲಿ ಗ್ರಾಮ ಪಂಚಾಯತಿ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಭಂಡಾರಿ, ಸರ್ಕಾರಿ ಶುಶ್ರೂಷಾ ಶಾಲೆಯ ಹಾಗೂ ಮಹಾವಿದ್ಯಾಲಯ ಬಿಮ್ಸ್ ಪ್ರಾಂಶುಪಾಲರಾದ ಪ್ರಕಾಶ ಕೊಡ್ಲಿ ಹಾಗೂ ನಾಮದೇವ ಮಾಳಗಿ ಅವರು ಜಾಥಾಗೆ ಚಾಲನೆ ನೀಡಿದರು. ನಂತರ ಸರ್ಕಾರಿ ಶುಶ್ರುಷಾ ಶಾಲೆ ಹಾಗೂ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಮಲೇರಿಯಾ ಕುರಿತು ಬೀದಿ ನಾಟಕ ಪ್ರದರ್ಶಿಸಿ ಸಾರ್ವಜನಕ ಅರಿವು ಮೂಡಿಸಲಾಯಿತು.

ಬಿಮ್ಸ್ ಸಮುದಾಯ ವೈದ್ಯಶಾಸ್ತ ಸಹಾಯಕ ಪ್ರಾಧ್ಯಾಪಕ ಡಾ. ಮಂಜುನಾಥ ಕಾಂಬಳೆ, ಬಿಮ್ಸ್ ಮಹಾವಿದ್ಯಾಲಯ, ಬೋಧಕ ಸಿಬ್ಬಂದಿಗಳಾದ ಭೀಮಪ್ಪ ಕೋಣಿ, ಶ್ರೀಶೈಲ ಗೌರಿ, ಆಯಿಶಾ ಬೆಗಂ, ಡಾ.ಸುನಂದಾ ಕಾತೇದಾರ ಹಾಗೂ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.